( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ 26/06/2019

ಅಸಲು ದಾವೆ.ನಂ. 172/2015

( ಮುಖ್ಯ ವಿಚಾರಣೆಃ ಶ್ರೀ. ಎಂ.ವೈ.ಪಿ. ವಕೀಲರಿಂದ )

ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಇರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ, ಸಹಿಗಳು ನನ್ನದೆ ಇದೆ.

ಚಿಕ್ಕಬೆಮ್ಮತ್ತಿ ಗ್ರಾಮದ ಸರ್ವೆ ನಂಃ 85/3 ರಲ್ಲಿ ರ 2001-02 ನೇ ಸಾಲಿನ ಒಂದು ಗಣಕೀಕೃತ ಪಹಣಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಚಿಕ್ಕಬೆಮ್ಮತ್ತಿ ಗ್ರಾಮದ ಸರ್ವೆ ನಂಃ 85/3 ರಲ್ಲಿ 2013-14 ನೇ ಸಾಲಿನ ಒಂದು ಗಣಕೀಕೃತ ಪಹಣಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಚಿಕ್ಕಬೆಮ್ಮತ್ತಿ ಗ್ರಾಮದ ಸರ್ವೆ ನಂಃ 85/3 ರಲ್ಲಿ ರ 2014-2015 ನೇ ಸಾಲಿನ ಒಂದು ಗಣಕೀಕೃತ ಪಹಣಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎಂ.ಆರ್. ನಂಃ 18/1997-98 ರ ಹಕ್ಕು ಬದಲಾವಣೆ ವಹಿಯ ದೃಡೀಕೃತ ನಕಲನ್ನು ಚಿಕ್ಕಬೆಮ್ಮತ್ತಿ ಗ್ರಾಮದ ಸರ್ವೆ ನಂಃ 85/3 ರಲ್ಲಿ ರ 2001-02 ನೇ ಸಾಲಿನ ಒಂದು ಗಣಕೀಕೃತ ಪಹಣಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಒಂದು ಅಟ್ಲಾಸ್ ನ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-5 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ಜಮೀನಿನ ವಿಚಾರವಾಗಿ ಚಾಮುಂಡೇಶ್ವರಿ ಸೇವಾ ಕಾಗಿನಹರೆ ಇಲ್ಲಿ ದೂರು ಸಲ್ಲಿಸಿದ್ದು ವಿಚಾರಣೆಗೆ ಹಾಜರಾಗುವಂತೆ ನನಗೆ ನೀಡಿದ ನೋಟೀಸ್ ನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಜಮೀನಿನ ವಿಚಾರವಾಗಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದು ಅದರ ಬಗ್ಗೆ ಪೊಲೀಸರು ನೀಡಿದ ಹಿಂಬರಹವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಎಂ.ಆರ್. ನಂಃ 11/2014-15 ರ ಹಕ್ಕು ಬದಲಾವಣೆ ವಹಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಒಂದು ಋಣಭಾರ ರಾಹಿತ್ಯ ಪತ್ರವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-9 ಎಂದು

ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಇಂಡೆಕ್ಸ್ ಆಫ್ ಲ್ಯಾಂಡ್ಸ್ ಮತ್ತು ರೆಕಾರ್ಡ್ ಆಫ್ ರೈಟ್ಸ್ ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. ನಮ್ಮ ಕುಟುಂಬದ ನೋಟರಿ ಪ್ರಮಾಣಿ ವಂಶ ವೃಕ್ಷವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ದಿಃ12-02-2016 ರಂದು ದಾವಾ ಸ್ವತ್ತನ್ನು 1 ರಿಂದ 3 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ 13 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದರಿಂದ ಅನುಮತಿಸಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.